ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ವಿವೇಕ ವಸಂತರಾವ್ ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**421**
ಉತ್ತರಿಸಬೇಕಾದ ದಿನಾಂಕ	:	15.09.2021
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಸನ್ 2019-20, 2020-21 ಮತ್ತು 2021-22 ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಯಡಿ ಮನೆ ಹಂಚಿಕೆಯಾಗದೇ ಇರುವುದರಿಂದ ನಿವೇಶನ ರಹಿತ ಬಡ ಕುಟುಂಬಗಳು ವಸತಿ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	**ಕೇಂದ್ರ ಪುರಸ್ಕೃತ ಯೋಜನೆ – ಪಿಎಮ್‌ಎವೈ (ಗ್ರಾಮೀಣ):-** ಪ್ರಧಾನ ಮಂತ್ರಿ ಅವಾಸ್ ಯೋಜನೆ(ಗ್ರಾಮೀಣ) 2019-2020 ನೇ ಸಾಲಿಗೆ ಕೇಂದ್ರ ಸರ್ಕಾರವು 42,267 ಮನೆಗಳ ಗುರಿಯನ್ನು ನೀಡಿದ್ದು, ಈ ಪೈಕಿ 40694 ಫಲಾನುಭವಿಗಳು ಆಯ್ಕೆಯಾಗಿ ಹಂಚಿಕೆಯಾಗಿರುತ್ತದೆ. ಪಿ.ಎಂ.ಎ.ವೈ(ಗ್ರಾಮೀಣ) ಅಡಿಯಲ್ಲಿ ಕೇಂದ್ರ ಸರ್ಕಾರವು ನೀಡಿದ್ದ Permanent Waiting List ನಲ್ಲಿ ಅರ್ಹ ವಸತಿ ರಹಿತರು ಲಭ್ಯವಿಲ್ಲದೇ ಇರುವುದರಿಂದ, ಕೇಂದ್ರ ಸರ್ಕಾರವು 2020-21 ನೇ ಸಾಲಿಗೆ ನೀಡಲಾದ ಗುರಿಯನ್ನು ಅಧ್ಯರ್ಪಣೆ ಮಾಡುವಂತೆ ದಿನಾಂಕ;23.03.2021 ರಂದು ತಿಳಿಸಿದ್ದು, ಅದರಂತೆ ರಾಜ್ಯ ಸರ್ಕಾರವು ದಿನಾಂಕ:15.05.2021 ರಂದು ಅಧ್ಯರ್ಪಣೆ ಮಾಡಿದೆ. 2018 ನೇ ಸಾಲಿನಲ್ಲಿ ಕೈಗೊಂಡ ವಸತಿ/ನಿವೇಶನ ರಹಿತರ ಸಮೀಕ್ಷೆಯನ್ವಯ ರಾಜ್ಯದಲ್ಲಿ 25,40,207 ವಸತಿ ಮತ್ತು ನಿವೇಶನ ರಹಿತರಿದ್ದು, ಸದರಿ ಅಂಕಿ ಅಂಶವನ್ನು ಪರಿಗಣಿಸಿ, ರಾಜ್ಯಕ್ಕೆ ಪಿ.ಎಂ.ಎ.ವೈ(ಗ್ರಾಮೀಣ) ಯೋಜನೆಯಡಿ ಹೊಸ ಮನೆಗಳ ಗುರಿಯನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮಾನ್ಯ ಮುಖ್ಯ ಮಂತ್ರಿಯವರು, ವಸತಿ ಸಚಿವರು ಹಾಗೂ ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ ರವರು ಪತ್ರವನ್ನು ಬರೆದಿದ್ದು, ಕೇಂದ್ರ ಸರ್ಕಾರದಿಂದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರದಿಂದ ಗುರಿ ನೀಡಿದ ನಂತರ ಮನೆ ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. **ಕೇಂದ್ರ ಪುರಸ್ಕೃತ ಯೋಜನೆ – ಪಿಎಮ್‌ಎವೈ (ನಗರ):** ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ದಡಿ 2019-20, 2020-21 ಮತ್ತು 2021-22 ನೇ ಸಾಲಿನಲ್ಲಿ ಒಟ್ಟು 118371 ಮನೆಗಳಿಗೆ ಅನುಮೋದನೆ ದೊರೆತಿದೆ. ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಡಿ ಕೇಂದ್ರ ಸರ್ಕಾರವು ಯಾವುದೇ ಭೌತಿಕ ಗುರಿಯ ಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಕೇಂದ್ರ ಸರ್ಕಾರದ ಸಹಾಯಧನ ಪಡೆದು ಮನೆ ನಿರ್ಮಿಸಿಕೊಳ್ಳಲು ಆಸಕ್ತಿ ಹೊಂದಿರುವ ಎಲ್ಲಾ ಕುಟುಂಬಗಳಿಗೆ ಮನೆ ಒದಗಿಸಲಾಗುವುದು.
(ಆ)	ಬಂದಿದ್ದಲ್ಲಿ, ವಸತಿ ಯೋಜನೆಯಡಿ ಸನ್ 2019-20, 2020-21 ಮತ್ತು 2021-22 ನೇ ಸಾಲಿನಲ್ಲಿ ನಿವೇಶನ/ಮನೆ ಹಂಚಿಕೆ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ?	

2021-2022 ನೇ ಸಾಲಿನಲ್ಲಿ ರಾಜ್ಯ ಪುರಸ್ಕೃತ ಯೋಜನೆಯಡಿ 1 ಲಕ್ಷ ಮನೆಗಳ ಗುರಿಯನ್ನು ನಿಗದಿಪಡಿಸಲಾಗಿದೆ. ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಯೋಜನೆಯಡಿ ಕೇಂದ್ರ ಸರ್ಕಾರದಿಂದ ಪರಿಷ್ಕೃತ ಗುರಿಯನ್ನು ನಿರೀಕ್ಷಿಸಲಾಗಿದೆ. ಸದರಿ ಗುರಿಯನ್ನು ಯೋಜನಾವಾರು/ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವ ಸವಿನೆನಪಿಗಾಗಿ 750 ಗ್ರಾಮೀಣ ಪ್ರದೇಶದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ವಸತಿ ರಹಿತ ಮತ್ತು ಆಶ್ರಯ ರಹಿತರನ್ನು ಗುರುತಿಸಿ, ಸರ್ವರಿಗೂ ವಸತಿ ಕಲ್ಪಿಸಲು "ಅಮೃತ ಗ್ರಾಮೀಣ ವಸತಿ ಯೋಜನೆ" ಯನ್ನು ಜಾರಿಗೆ ತಂದಿದ್ದು, ಅದರನ್ವಯ 30 ಜಿಲ್ಲೆಗಳಲ್ಲಿನ 194 ವಿಧಾನಸಭಾಕ್ಷೇತ್ರಗಳ 750 ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

ನಿವೇಶನ ಯೋಜನೆ :

ಅರ್ಹ ನಿವೇಶನರಹಿತ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲು ಗ್ರಾಮೀಣ ಪ್ರದೇಶದಲ್ಲಿ ಮುಖ್ಯ ಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ ಮತ್ತು ನಗರ ಪ್ರದೇಶದಲ್ಲಿ ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆಗಳು ಜಾರಿಯಲ್ಲಿದ್ದು ಈ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದ್ದು, ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ವಸತಿಗೆ ಸೂಕ್ತ ಖಾಸಗಿ ಜಮೀನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಜಮೀನು ಖರೀದಿ ಸಮಿತಿಯನ್ನು ರಚಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್‌ಎಹೆಚ್ 2016, ದಿನಾಂಕ: 12.07.2016 ಮತ್ತು 14.07.2017 ರಲ್ಲಿ ಜಮೀನು ಖರೀದಿ ದರಗಳನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ.

ಪ್ರದೇಶ	**ಗರಿಷ್ಟ ಮಿತಿ (ಪ್ರತಿ ಎಕರೆಗೆ) (ರೂ.ಲಕ್ಷಗಳಲ್ಲಿ)**
ಗ್ರಾಮೀಣ ಪ್ರದೇಶ	ರೂ.9.00
ಪಟ್ಟಣ ಪಂಚಾಯಿತಿ	ರೂ.12.00
ಪುರಸಭೆ	ರೂ.15.00
ನಗರಸಭೆ	ರೂ.22.50
ಮಹಾನಗರ ಪಾಲಿಕೆ	ರೂ. 37.50
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	ರೂ. 75.00

		ರಾಜ್ಯದಲ್ಲಿ 2019-20, 2020-21 ಮತ್ತು 2021-22 ನೇ ಆರ್ಥಿಕ ವರ್ಷದಲ್ಲಿ ನಿವೇಶನ ಯೋಜನೆಗಳಡಿ ಒಟ್ಟು 8915 ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಯೋಜನಾವಾರು ವಿವರ ಈ ಕೆಳಗಿನಂತಿದೆ. **ನಿವೇಶನ ಯೋಜನೆ** — **ಹಂಚಿಕೆ ಮಾಡಲಾದ ನಿವೇಶನಗಳು** ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ — 5894 ಮುಖ್ಯಂತ್ರಿಗಳ ನಗರ ನಿವೇಶನ ಯೋಜನೆ — 3021 ಒಟ್ಟು — 8915 ಮೇಲ್ಕಂಡ ನಿವೇಶನ ಯೋಜನೆಗಳಡಿ ಮಂಜೂರಾದ ಸರ್ಕಾರಿ/ಖರೀದಿಸಲಾದ ಖಾಸಗಿ ಜಮೀನನ್ನು ಬಳಸಿಕೊಂಡು ಅರ್ಹ ನಿವೇಶನರಹಿತ ಕುಟುಂಬಗಳಿಗೆ ಹಂತ ಹಂತವಾಗಿ ನಿವೇಶನ/ವಸತಿ ಸೌಕರ್ಯ ಒದಗಿಸಲು ಕ್ರಮವಹಿಸಲಾಗುತ್ತಿದೆ.

ನಿವೇಶನ ಯೋಜನೆ	ಹಂಚಿಕೆ ಮಾಡಲಾದ ನಿವೇಶನಗಳು
ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ	5894
ಮುಖ್ಯಂತ್ರಿಗಳ ನಗರ ನಿವೇಶನ ಯೋಜನೆ	3021
ಒಟ್ಟು	8915

ಸಂಖ್ಯೆ :ವಇ 289 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು